ಸಂಧಿಸುತ್ತಿದ್ದೆವು. ಅಪ್ಪ ಮನೆಗೆ ಎಂದೂ ಬೇಗ ಬರುತ್ತಿರಲಿಲ್ಲ. ಆ ಭೇಟಿಗಳು ತುಂಬಾ ಚುಟುಕಾಗಿರುತ್ತಿದ್ದರೂ, ಹೇರಾಸೆಯ ಉತ್ಕಟತೆಯಿಂದ ಕೂಡಿದ ಚುಂಬನಗಳಿರುತ್ತಿದ್ದರೂ, ಅವುಗಳಿಗೆ ಅಸಹನೀಯ ಅಪೂರ್ಣತೆಯಿರುತ್ತಿತ್ತು. ಅಪ್ಪನಿಗೆ ಇದರ ವಾಸನೆ ಸಿಕ್ಕಿತ್ತು ಅನಿಸುತ್ತದೆ, ಅವನು ಸಂಜೆಯ ಟೀಗಾಗಿ ಡೈನಿಂಗ್ ಹಾಲ್‌ಗೆ ಬರುವುದನ್ನು ನಿಲ್ಲಿಸಿದ. ಮತ್ತೆ ಮತ್ತೂ ಮೌನಿಯಾಗತೊಡಗಿದ್ದುದರ ಜೊತೆಗೆ, ಹೆಚ್ಚು ಹೆಚ್ಚು ಸಿಡುಕತೊಡಗಿದ. ಆದರೆ, ಅನಂತರ ಊಟದ ಟೇಬಲ್ಲಿನಲ್ಲಿ ಅವಳ ವರ್ತನೆಗೆ ಅನುದ್ವಿಗ್ನತೆ ಹಾಗೂ ಸಮಚಿತ್ತತೆ ಬಂದಿತ್ತು.

ಜುಲೈನ ಮೊದಲ ವಾರದಲ್ಲಿ ತಂಗಿ ಲೀಲ್ಯಾ ಅತಿಯಾಗಿ ರಾಸ್‌ಬರಿ ಹಣ್ಣುಗಳನ್ನು ತಿಂದು ಕಾಯಿಲೆ ಬಿದ್ದಳು. ಅನಂತರ ಮೆಲ್ಲಗೆ ಚೇತರಿಸಿಕೊಳ್ಳತೊಡಗಿದಳು. ಆಗ ಅವಳು ಕ್ರೆಯಾನ್ ಬಣ್ಣದ ಕಡ್ಡಿಗಳಿಂದ ಕಾಗದದ ದೊಡ್ಡ ದೊಡ್ಡ ಹಾಳೆಗಳ ಮೇಲೆ ಕಾಲ್ಪನಿಕ ಪಟ್ಟಣಗಳನ್ನು ಬಿಡಿಸುತ್ತಾ ಹಗಲೆಲ್ಲಾ ಕಾಲ ಕಳೆಯುತ್ತಿದ್ದಳು. ಹಾಗಾಗಿ, ಎಲೇನಾಗೆ ಅವಳ ಹಾಸಿಗೆಯ ಬಳಿಯೇ ಇರದೆ ಬೇರೆ ಮಾರ್ಗವಿರಲಿಲ್ಲ. ಆಗವಳು ತನಗಾಗಿ ಉಕ್ರೇನಿಯನ್ ರವಿಕೆಯೊಂದನ್ನು ಹೆಣಿಗೆ ಹಾಕುತ್ತಾ ಕೂತಿರುತ್ತಿದ್ದಳು. ಅವಳು ಅಲ್ಲಿಂದ ಒಂದು ಘಳಿಗೆಯೂ ಕದಲುವಂತಿರಲಿಲ್ಲ. ಏಕೆಂದರೆ, ಲೀಲ್ಯಾಳನ್ನು ಆ ಹೊತ್ತಿನಲ್ಲಿ ನಿರಂತರ ನಿಗಾದಿಂದ ನೋಡಿಕೊಳ್ಳಬೇಕಿತ್ತು. ಮೌನದೊಳಗೆ ಹೂತುಹೋಗಿದ್ದ ಆ ಖಾಲಿ ಮನೆಯೊಳಗೆ ನಾನೊಬ್ಬನೇ. ಅವಳನ್ನು ನೋಡುವ, ಅವಳನ್ನು ಮುತ್ತಿಕ್ಕುವ, ಬಿಗಿಯಾಗಿ ತಬ್ಬಿ ಹಿಡಿವ... ಹತ್ತಿಕ್ಕಲಾಗದ ತುಡಿತದ ಯಮಯಾತನೆಯಲ್ಲಿ ಬೇಯುತ್ತಿದ್ದೆ. ಅಪ್ಪನ ಓದುವ ರೂಮಿಗೆ ಹೋಗಿ ಕೈಗೆ ಸಿಕ್ಕ ಪುಸ್ತಕವನ್ನು ಎತ್ತಿಕೊಂಡು ಓದಲು ನೋಡಿದೆ. ಹೆಚ್ಚು ಕಡಿಮೆ ಸಂಜೆಯಾಗತೊಡಗಿತ್ತು. ಆಗ ಇದ್ದಕ್ಕಿದ್ದಂತೆ ಅವಳ ಹಗುರ, ಚುರುಕು ಹೆಜ್ಜೆಯ ಸದ್ದುಗಳು ಕೇಳಿಸಿದವು. ಕೈಲಿದ್ದ ಪುಸ್ತಕವನ್ನು ಹಾಗೆಯೇ ಎತ್ತಿ ಒಗೆದು ಚಕ್ಕನೆ ಎದ್ದು ನಿಂತೆ.

‘ಅವಳಿಗಾಗಲೇ ನಿದ್ದೆ ಬಂತಾ?’

ಅವಳು ನಿರಾಸೆಯ ಸನ್ನೆ ಮಾಡಿದಳು.

‘ಓಹ್, ಇಲ್ಲ! ನಿನಗೆ ಗೊತ್ತಿಲ್ಲ, ಅವಳು ಎರಡು ಹಗಲು ಎರಡು ರಾತ್ರಿ ಬೇಕಾದರೂ ಕಣ್ಣರೆಪ್ಪೆ ಮುಚ್ಚದೆ ಹುಚ್ಚರ ಹಾಗೆ ಕಳೆಯಬಲ್ಲಳು! ನಾನಿಲ್ಲಿ ಬಂದಿರೋದು ಅವಳಿಗೋಸ್ಕರ ಕೆಲವು ಹಳದಿ ಮತ್ತು ಕಿತ್ತಲೆ ಬಣ್ಣದ ಪೆನ್ಸಿಲ್‌ಗಳನ್ನು ಅವಳ ಅಪ್ಪನ ಮೇಜಿನ ಮೇಲಿಂದ ಹುಡುಕಿಕೊಂಡು ಹೋಗಲು...’

ಹಾಗಂದವಳೇ ನನ್ನ ಹತ್ತಿರ ಬಂದು, ಥಟ್ಟನೆ ಕಣ್ಣೀರು ತುಂಬಿಕೊಂಡು, ನನ್ನ ಎದೆಯ ಮೇಲೆ ತಲೆಯನ್ನಿಟ್ಟು, ‘ಓಹ್ ದೇವರೇ, ಇದೆಲ್ಲಾ ಮುಗಿಯೋದಾದರೂ ಯಾವಾಗ? ಕೊನೆಯ ಪಕ್ಷ ನಿನ್ನ ಅಪ್ಪನಿಗಾದರೂ ಹೇಳು, ನೀನು ನನ್ನನ್ನ ಪ್ರೀತಿಸುತ್ತಿದ್ದೀನಿ, ಈ ಲೋಕದ ಏನೊಂದೂ ನಮ್ಮಿಬ್ಬರನ್ನು ದೂರಮಾಡಲು ಸಾಧ್ಯವಿಲ್ಲ ಅಂತ.’

ಕಣ್ಣೀರಿನಿಂದ ಒದ್ದೆಯಾಗಿದ್ದ ಮುಖವನ್ನೆತ್ತಿ, ರಭಸದಿಂದ ತೋಳುಗಳನ್ನು ನನ್ನತ್ತ ಚಾಚಿ, ಉಸಿರುಗಟ್ಟಿಸುವಂಥ ಚುಂಬನದೊಂದಿಗೆ ನನಗೆ ಜೋತು ಬಿದ್ದಳು. ಅವಳಿಡೀ ಮೈಯನ್ನು ನನ್ನದಕ್ಕೆ ಒತ್ತಿಕೊಂಡು, ಹಾಗೆಯೇ ಅವಳನ್ನೂ ಎಳೆದುಕೊಂಡು ಸೋಫಾದತ್ತ ಹೋದೆ. ಏನನ್ನಾದರೂ ಯೋಚಿಸುವ, ಇಲ್ಲಾ ನೆನಪಿಸಿಕೊಳ್ಳಬಲ್ಲಂಥ ಕ್ಷಣವಾಗಿತ್ತೇ ಅದು? ಆದರೆ, ಬಾಗಿಲ ಕಡೆಯಿಂದ ಯಾರೋ ಮೆಲ್ಲಗೆ ಕೆಮ್ಮಿದ ಸದ್ದಾಯ್ತು. ಅವಳನ್ನು ಹಾಗೆಯೇ ತಬ್ಬಿ ಹಿಡಿದು ಅವಳ ಭುಜದ ಮೇಲಿಂದಲೇ ಅತ್ತ ನೋಡಿದೆ. ಅಲ್ಲಿ ಅಪ್ಪ ನಮ್ಮತ್ತಲೇ ನೋಡುತ್ತಾ ನಿಂತಿದ್ದ! ಅನಂತರ ಅವನು ಭುಜಗಳನ್ನು ಕುಣಿಸಿಕೊಂಡು ಅಲ್ಲಿಂದ ನಡೆದುಹೋದ.

ಆ ರಾತ್ರಿ ನಾನಾಗಲಿ, ಅವಳಾಗಲಿ ರಾತ್ರಿಯ ಊಟಕ್ಕೆ ಹೋಗಲಿಲ್ಲ. ಅನಂತರ ನಮ್ಮ